ಊರಿನಲ್ಲೇ ಇದ್ದ ಪಂಡಿತನಿಂದ ಕೆಲವು ಗಿಡಮೂಲಿಕೆ ಔಷಧಿಗಳನ್ನು ಕೊಡಿಸಿದರು. ಆದರೂ ಅವಳ ಆರೋಗ್ಯ ಸುಧಾರಿಸಲಿಲ್ಲ.

ಪಾರ್ವತಜ್ಜಿಯು ಏಳಲಾಗದೆ, ಓಡಾಡಲಾಗದೆ ಹಾಸಿಗೆ ಹಿಡಿದಿರುವ ವಿಷಯ ಕೇಳಿ ಶಂಕರನು ಕನಲಿ ಹೋದ. ಅಜ್ಜಿಯನ್ನು ನೋಡಲು ಊರಿಗೆ ಹೋದ. ಅಜ್ಜಿಯನ್ನು ಮನೆಯ ಹಜಾರದಲ್ಲಿ ಒಂದು ಹಾಸಿಗೆಯಲ್ಲಿ ಮಲಗಿಸಲಾಗಿತ್ತು. ಹಾಸಿಗೆಯಲ್ಲಿ ಮಲಗಿದ್ದ ಕಡೆಯಲ್ಲೇ ಎಲ್ಲಾ ವ್ಯವಸ್ಥೆಯಾಗಿತ್ತು.

'ಅಜ್ಜಿ ಹೆಂಗಿದಿಯಾ?' ಎಂದ ಶಂಕರನಿಗೆ, 'ಮೊದಲು ಊಟ ಮಾಡಿ ಬಾ. ಆಮೇಲೆ ನನ್ನ ಕಥೆ ಹೇಳ್ತೀನಿ' ಎಂದಳು. ಎಷ್ಟೇ ನೋವಿನಲ್ಲಿದ್ದರೂ ತನ್ನ ಬಗ್ಗೆ ಯೋಚಿಸದೆ ಬೇರೆಯವರ ಉಪಚಾರದ ಬಗ್ಗೆ ಯಾವಾಗಲೂ ಯೋಚಿಸುವ ಗುಣವೇ ಪಾರ್ವತಜ್ಜಿಯನ್ನು ಬೇರೆಯವರಿಂದ ಬೇರ್ಪಡಿಸಿತ್ತು. 'ನಿಮ್ಮ ಅಜ್ಜಿ ಒಂದು ವಾರದಿಂದ ಊಟವನ್ನೇ ಸರಿಯಾಗಿ ಮಾಡುತ್ತಿಲ್ಲ' ಎಂದಳು ಅತ್ತೆ. ಮೊದಲಿನಂತೆ ಅಜ್ಜಿಯು ಈಗ ಎದ್ದು ಓಡಾಡುವಂತಿರಲಿಲ್ಲ, ಹಾಗಾಗಿ ಮಲಗಿದ್ದ ಕಡೆಯೇ ಮಲಮೂತ್ರ ಎಲ್ಲಾ ಆಗುತ್ತಿತ್ತು. ಬೇರೆಯವರಿಗೆ ತನ್ನ ಜೀವನದಲ್ಲಿ ಒಮ್ಮೆಯೂ ತೊಂದರೆ ಕೊಡದ ಪಾರ್ವತಜ್ಜಿಗೆ ತನ್ನ ಮಲಮೂತ್ರಗಳನ್ನು ಬೇರೆಯವರ ಕೈಲಿ ಎತ್ತಿಸಲು ಇಷ್ಟವಿರಲಿಲ್ಲ. ಹಾಗಾಗಿ ತನಗೆ ಹಸಿವಿಲ್ಲ ಎಂಬ ನೆಪ ಹೇಳಿ ಸರಿಯಾಗಿ ಊಟ ಮಾಡುತ್ತಿಲ್ಲ ಎಂದು ಶಂಕರನಿಗೆ ಗೊತ್ತಾಯಿತು. ಮೊದಲೇ ಸಣ್ಣಗಿದ್ದ ಪಾರ್ವತಜ್ಜಿ ಈಗ ಮತ್ತಷ್ಟು ಇಳಿದು ಹೋಗಿದ್ದಳು. ಆದರೂ ಶಂಕರನು ಬಂದಿದ್ದಕ್ಕೆ ಗೆಲುವಾಗಿ ಅವನೊಂದಿಗೆ ಬಹಳ ಹೊತ್ತು ಮಾತನಾಡಿದಳು.

'ಈ ಗಿಡಮೂಲಿಕೆಗಳಿಂದ ಹಾಗೂ ಯಂತ್ರಮಂತ್ರಗಳಿಂದ ಹೃದಯದ ಸಮಸ್ಯೆ ಪರಿಹಾರವಾಗುವುದಿಲ್ಲ. ಹೃದಯದ ಆಪರೇಷನ್ ಮಾಡಿಸಿದರೆ ಮಾತ್ರ ಅಜ್ಜಿ ಬೇಗ ಗುಣವಾಗಿ ಎದ್ದು ಮೊದಲಿನಂತೆ ಓಡಾಡುತ್ತಾಳೆ' ಎಂದು ಶಂಕರನು ತನ್ನ ಇಬ್ಬರು ಮಾವಂದಿರಿಗೂ ತಿಳಿಹೇಳಿದ. 'ಅಯ್ಯೋ ಅದೆಲ್ಲಾ ನಾವು ಹೇಳಾಯ್ತು. ನಿಮ್ಮಜ್ಜಿಗೆ ಆಪರೇಷನ್ ಅಂದರೆ ಬಹಳ ಹೆದರಿಕೆ. ಸತ್ತರೂ ಚಿಂತೆಯಿಲ್ಲ, ಆಪರೇಷನ್ ಮಾತ್ರ ನಾನು ಎಂದಿಗೂ ಮಾಡಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದಾಳೆ' ಎಂದು ಇಬ್ಬರು ಮಾವಂದಿರೂ ಒಂದೇ ಕೋರಸ್‌ನಲ್ಲಿ ಹೇಳಿದರು.

'ಅಜ್ಜಿ ಆಪರೇಷನ್‌ಗೆ ಒಪ್ಪುತ್ತಿಲ್ಲವೆಂದರೆ ಮಾವಂದಿರು ತಾನೇ ಏನು ಮಾಡಿಯಾರು? ಬಹುಶಃ ಅಜ್ಜಿಗೆ ಬದುಕುವುದು ಇಷ್ಟವಿಲ್ಲ, ಸಾವನ್ನು ಎದುರು ನೋಡುತ್ತಿದ್ದಾಳೆ' ಎನಿಸಿತು ಶಂಕರನಿಗೆ.

ಊರಿಗೆ ಹೊರಡುವ ಮುಂಚೆ ಶಂಕರನಿಗೆ ಅಜ್ಜಿಯೊಂದಿಗೆ ಒಬ್ಬನೇ ಮಾತನಾಡಬೇಕೆನಿಸಿತು. ಬಂದಾಗಿನಿಂದ ತನಗೆ ಅಜ್ಜಿ ಏನೋ ಹೇಳಲು ಪ್ರಯತ್ನಿಸುತ್ತಿದ್ದಾಳೆ ಎನಿಸಿತು. ಆದ್ದರಿಂದ ಯಾರೂ ಇಲ್ಲದಿರುವ ಸಮಯದಲ್ಲಿ ಅಜ್ಜಿಯ ಹತ್ತಿರ ಹೋಗಿ, ಪಕ್ಕ ಕುಳಿತು ಅಜ್ಜಿಯ ಕೈಹಿಡಿದುಕೊಂಡ.



ಅಜ್ಜಿಯು, 'ಶಂಕರಾ, ನಮ್ಮ ವಂಶಕ್ಕೆ ನೀನೊಬ್ನೇ ಡಾಕ್ಟ್ರು, ನೀನು ಮನುಷ್ಯರ ಡಾಕ್ಟ್ರಾಗಿದ್ರೆ ನನ್ನ ಹೃದಯದ ಕಾಯಿಲೆಯನ್ನು ನೀನೇ ಸರಿ ಮಾಡ್ತಾ ಇದ್ದೆ ಅಲ್ವಾ? ನೀನು ನೋಡಿದ್ರೆ ದನಗಳ ಡಾಕ್ಟ್ರು. ಆದರೆ ಹೇಗಾದರೂ ಮಾಡಿ ನಾನು ಮೊದಲಿನಂತೆ ಓಡಾಡೋ ಹಾಗೆ ಮಾಡೋ ಶಂಕರ. ನನಗೆ ಈಗಲೇ ಸಾಯಲು ಇಷ್ಟವಿಲ್ಲ. ಇನ್ನೂ ನಿಮ್ಮ ಮದುವೆ ಮತ್ತು ನಿಮ್ಮ ಮಕ್ಕಳನ್ನು ನೋಡಿದ ನಂತರ ಹೋಗುತ್ತೇನೆ. ಆದ್ದರಿಂದ ಏನಾದರೂ ಮಾಡಿ ನನ್ನ ಈ ಕಾಯಿಲೆಯನ್ನು ಸರಿಪಡಿಸು. ಆದರೆ ಈ ವಿಷಯ ನಾನು